**ದಿನಾಂಕಃ 13.10.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ – ವಾದಿ ಪರ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿದ್ದು, ಅದನ್ನು ನಾನೇ ಹೇಳಿ ಬರೆಸಿದ್ದೇನೆ ಹಾಗೂ ಪ್ರಮಾಣ ಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ.

ದಿನಾಂಕಃ 09.09.2021 ರಲ್ಲಿ ವಾದಿ ಮತ್ತು ಪ್ರತಿವಾದಿಗಳ ಮಧ್ಯೆ ಆಗಿರುವ ಸ್ವಾಧೀನ ರಹಿತ ಕ್ರಯದ ಕರಾರು ಪತ್ರದ ನೋಂದಾಯಿತ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ–1 ಎಂದು ಗುರುತಿಸಲಾಯಿತು. ನಿಪಿ–1ಕ್ಕೆ ನಾನು ಮತ್ತು 4ನೇ ಪ್ರತಿವಾದಿ ಸಹಿ ಹಾಕಿರುತ್ತೇವೆ. 1 ರಿಂದ 3, 5 ಮತ್ತು 6ನೇ ಪ್ರತಿವಾದಿ ಹೆಬ್ಬೆಟ್ಟು ಗುರುತು ಹಾಕಿದ್ದಾರೆ. ನನ್ನ, 4ನೇ ಪ್ರತಿವಾದಿಗಳ ಸಹಿಗಳನ್ನು ನಿಪಿ–1(ಎ) ಮತ್ತು ನಿಪಿ–1(ಬಿ) ಎಂದು ಗುರುತಿಸಲಾಯಿತು. ನಿಪಿ–1ಕ್ಕೆ ಮೊಹಮದ್ ಸರ್ವರ್ ಮತ್ತು ಬಿಲವೇಂದ್ರನ್ ರವರು ಸಹಿ ಹಾಕಿದ್ದಾರೆ. ದಸ್ತಾವೇಜನ್ನು ಎಸ್. ಜಡೇಸ್ವಾಮಿಯವರು ಬರೆದಿರುತ್ತಾರೆ. ಎರಡು ಪಹಣಿಗಳನ್ನು ಹಾಜರು ಪಡಿಸಿದ್ದು ನಿಪಿ–2 ಮತ್ತು ನಿಪಿ–3 ಎಂದು, ಪ್ರತಿವಾದಿಯವರಿಗೆ ಕಳುಹಿಸಿದ ನೋಟಿಸಿನ ಕಛೇರಿ ಪ್ರತಿಯನ್ನು ನಿಪಿ–4 ಎಂದು, ಅಂಚೆ ರಶೀದಿಗಳನ್ನು ನಿಪಿ–4(ಎ) ರಿಂದ ನಿಪಿ–4(ಎಫ್) ಎಂದು ಗುರುತಿಸಲಾಯಿತು. 1, 5 ರಿಂದ 6ನೇ ಪ್ರತಿವಾದಿಗಳಿಗೆ ನೋಟಿಸ್ ಜಾರಿಯಾದ ಬಗ್ಗೆ ಅಂಚೆ ಸ್ವೀಕೃತಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ–5 ರಿಂದ ನಿಪಿ–10 ಎಂದು ಗುರುತಿಸಲಾಯಿತು.

**1 ರಿಂದ 6ನೇ ಪ್ರತಿವಾದಿಗಳ ಪರ ವಕೀಲರು ಗೈರು ಹಾಜರಾದ ಕಾರಣ ಪಾಟೀ ಸವಾಲು ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.